**ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ**

**ಸಿಸಿ ನಂಃ 51/2016**

**ಸಿಡಬ್ಲೂಃ4 ಪಿ ಡಬ್ಲ್ಯೂಃ1**

**ಹೆಸರುಃ ರಾಮಾಚಾರ್ಯ ಪುರಾಣಿಕ**

**ತಂದೆ ಹೆಸರುಃ ಅನಂತಚಾರ್ಯ**

**ವಯಸ್ಸುಃ 61 ವರ್ಷಗಳು.**

**ಉದ್ಯೋಗಃ ನಿವೃತ್ತ ಮೀನುಗಾರಿಕಾ ನಿರ್ದೇಶಕರು.**

**ವಾಸ ಸ್ಥಳಃ ಬೆಂಗಳೂರು.**

**ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತುಃ ದಿಃ19.07.2024.**

**ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ**

1. ನಾನು ಮೀನುಗಾರಿಕಾ ಹಿರಿಯ ಸಹಾಯಕ ನಿರ್ದೇಶನಕಾಗಿ ಧಾರವಾಡ ವಲಯದಲ್ಲಿ 2009 ರಿಂದ 2011 ರವರೆಗೆ ಕರ್ತವ್ಯವನ್ನು ನಿರ್ವಹಿಸಿರುತ್ತೇನೆ.

2. ಚಾಸಾಃ1 ರಿಂದ 3, 5, 8 ರಿಂದ 38 ರವರು ನನಗೆ ಪರಿಚಯ ಇರುವುದಿಲ್ಲ. ಚಾಸಾಃ6, 7 ರವರ ಪರಿಚಯ ಇದೆ. ನ್ಯಾಯಾಲಯದ ಮುಂದೆ ಇರುವ ಆರೋಪಿಗಳು 1, 2, 3, 8 ಮತ್ತು 15 ರವರ ಪೈಕಿ ಆರೋಪಿ 2 ರವರ ಪರಿಚಯ ಮಾತ್ರ ಇದೆ. 1 ನೇ ಆರೋಪಿ ಇಂಗಳಗಿ ಗ್ರಾಮ ಪಂಚಾಯ ಆಡಳಿತ ಅಧಿಕಾರಿ ಆಗಿದ್ದರಿಂದ ಅವರು ನಾನು ಈ ಪರಿಶೀಲನೆ ಕಾರ್ಯ ಮಾಡುವಾಗ ಕಾರ್ಯ ನಿರ್ವಹಿಸುತಿದ್ದ ಅಧಿಕಾರಿಗಳು ಆಗಿದದರು. ನನಗೆ 3 ನೇ ಆರೋಪಿ ಪರಿಚಯ ಇದೆ. 5 ನೇ ಆರೋಪಿ ನನಗೆ ಗೊತ್ತಿಲ್ಲ. 8 ರಿಂದ 15 ನೇ ಆರೋಪಿಗಳು ನನಗೆ ಗೊತ್ತಿಲ್ಲ.

3. ನಾನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ ಧಾರವಾಡ ಇವರು ನೀಡಿದ ನಿರ್ದೇಶನದನ್ವಯ ನಾನು ಜಾಗೃತ ದಳದ ಮುಖ್ಯಸ್ಥನಾಗಿ ಕುಂದಗೋಳ ತಾಲೂಕಿನ ಶಿರೂರು ಮತ್ತು ಇಂಗಳಗಿ ಗ್ರಾಮ ಪಂಚಾಯತಿಗಳಲ್ಲಿ ನಡೆದ ಅವ್ಯವಹಾರದ ಬಗ್ಗೆ ತಪಾಸಣೆ ಮಾಡಲು ನನ್ನ ತಂಡದ ಸದಸ್ಯರಾದ ಎಇಇ ಸಿ.ಎಸ್ ದೇಸಾಯಿ, ಲೆಕ್ಕಾಧಿಕಾರಿ ಜಿಲ್ಲಾ ಪಂಚಾಯ ಮುಲ್ಲಾ ಅವರೊಂದಿಗೆ ದಿಃ14.10.2010 ರಂದು ಇಂಗಳಗಿ ಗ್ರಾಮ ಪಂಚಾಯತಿಗೆ ಭೇಟಿ ನೀಡಲಾಗಿ ಅಲ್ಲಿ ಇದ್ದ ಪಿಡಿಓ ಮತ್ತು ಕಾರ್ಯದರ್ಶಿಗಳಾದ ನದಾಫರವರೊಂದಿಗೆ ಚರ್ಚಿಸಿ ದಾಖಲೆಗಳಾದ ಚೆಕ್ಕು ಪುಸ್ತಕ, ಕ್ಯಾಶ ಬುಕ್, ಎಮ್ ಜಿ ಎನ್ ಆರ್ ಇ ಜಿ ಎ

ಯೋಜನೆಯ ಕಾಮಗಾರಿಗಳ ಪಟ್ಟಿಯೊಂದಿಗೆ ಮತ್ತು ಈ ಒಂದು ದೂರು ನೀಡಿದ ವ್ಯಕ್ತಿಗಳಾದ ಮುಲ್ಲಾ ಮತ್ತು ಚಾಸಾಃ6 ಅವರೊಂದಿಗೆ ದಾಖಲೆಗಳನ್ನು ನಾವು ಪರಿಶೀಲಿಸಿದೇವು.

4. ನಮಗೆ ಬಂದ ದೂರು ನಿರ್ದಿಷ್ಟವಾಗಿ ಅದು ಆರು ರಸ್ತೆಗಳಿಗೆ ಸಂಬಂದಪಟ್ಟ ಹಾಗೇ ಇದ್ದು, ಅದರಲ್ಲಿ ಮತ್ತು ಹಿರೇಬೂದಿಹಾಳದಿಂದ ಕುಂದಗೋಳಗೆ ಬರುವ ರಸ್ತೆಗೆ ಸಂಬಂದಪಟ್ಟ ಎನ್ ಎಮ್ ಆರ್ ಗಳನ್ನು ಪರಿಶೀಲಿಸಿದಾಗ ಅದರಲ್ಲಿ ಒಟ್ಟು 118 ಕೂಲಿ ಆಳುಗಳ ಹೆಸರು ನಮೂದಿಸಲಾಗಿದ್ದು, ಆ ಪೈಕಿ ಆರು ಜನರಿಗೆ ಮಾತ್ರ ಸದರಿ ಯೋಜನೆಯಡಿಯಲ್ಲಿ ಹಣ ಸಂದಾಯವಾಗಿರುವ ಬಗ್ಗೆ ಕಂಡುಬಂದಿದ್ದು, ಮತ್ತೊಂದು ಎನ್ ಎಮ್ ಆರ್ ಸಂಖ್ಯೆಯನ್ನು ನೋಡಲಾಗಿ ಅದರಲ್ಲಿ 150 ಕೂಲಿ ಆಳಗಳ ಹೆಸರು ನಮೂದಿಸಿಲಾಗಿದ್ದು, ಆದರೆ ಆ ಪೈಕಿ ಕೇವಲ ಐದು ಜನರಿಗೆ ಮಾತ್ರ ಯೋಜನೆಯಡಿಯಲ್ಲಿ ಹಣ ಸಂದಾಯ ಆಗಿರುವ ಬಗ್ಗೆ ಕಂಡುಬಂದಿದ್ದು ಇರುತ್ತದೆ. ಸದರಿ ದಾಖಲೆಗಳ ಪರಿಶೀಲಿಸಿದಾಗ ಈ ಯೋಜನೆಯಡಿಯಲ್ಲಿ ಯಾವುದೇ ಯಂತ್ರಗಳನ್ನು ಬಳಸುವ ಅನುಮತಿ ಇರುವುದಿಲ್ಲ ಎಂಬುದು ಕಂಡುಬಂದಿದ್ದು. ಈ ರೀತಿ ಎರಡು ಎನ್ ಎಮ್ ಆರ್ ಗಳಲ್ಲಿ 118 ಮತ್ತು 150 ಕೂಲಿ ಹೆಸರು ನಮೂದಿದ್ದರು ಸಹ ಆ ಪೈಕಿ ಕೇವಲ ಐದು ಜನರು ಮತ್ತು ಇನ್ನುಳಿದ ಆರು ಜನರಿಗೆ ಸದರಿ ಯೋಜನೆಯಡಿಯಲ್ಲಿ ಹಣ ಸಂದಾಯ ಮಾಡಿರುವುದು ಕಂಡುಬಂದಿದ್ದು. ನಂತರದಲ್ಲಿ ಮೇಲೆ ಹೇಳಿದ ಹಾಗೇ ಇನ್ನುಳಿದ ಒಟ್ಟಾರೆ ಕೂಲಿ ಆಳುಗಳಿಗೆ ಯಾವುದೇ ಹಣ ಸಂದಾಯ ಮಾಡಿರುವ ಬಗ್ಗೆ ಕಂಡುಬಂದಿದ್ದು, ಆದ್ದರಿಂದ ಸದರಿಯವರಿಗೆ ನೀಡಬೇಕಾದ ಹಣವು ದುರುಪಯೋಗ ಆಗಿರುವ ಬಗ್ಗೆ ನಮಗೆ ಕಂಡುಬಂದಿರುತ್ತದೆ.

5. ಯರೇಬೂದಿಹಾಳದಿಂದ ಗುರುವಿನಹಳ್ಳಿಗೆ ಹೋದಾಗ ಇಲ್ಲಿಯೂ ಸಹ 80 ಕೂಲಿ ಆಳುಗಳ ಹೆಸರುಗಳನ್ನು ನಮೂದಿಸಲಾಗಿದ್ದು, ಆ ಪೈಕಿ 8 ಜನರಿಗೆ ಮಾತ್ರ ರೂ 55,900/ ಮಾತ್ರ ಸಂದಾಯ ಆಗಿರುವುದು ಕಂಡುಬಂದಿರುತ್ತದೆ.

6. ಯರೇಬೂದಿಹಾಳದಿಂದ ಮತ್ತಿಗಟ್ಟಿಗೆ ಹೋದಾಗ ಅಲ್ಲಿ ನಮಗೆ ನಮ್ಮ ಪರಿಶೀಲನೆಗೆ ಸಂಬಂದಪಟ್ಟವರು ಯಾವುದೇ ಎನ್ ಎಮ್ ಆರ್ ಪಟ್ಟಿಯನ್ನು ಹಾಜರುಪಡಿಸಿರುವುದಿಲ್ಲ. ಆದರೆ ರೂ 73,821/ ಖರ್ಚು ಮಾಡಿರುವ ಬಗ್ಗೆ ಖರ್ಚು ಹಾಕಿರುವುದು ಕಂಡುಬಂದಿರುತ್ತದೆ.

7. ಯರೇಬೂದಿಹಾಳದಿಂದ ನೆಲಗುಡ್ಡ ಮತ್ತು ತರ್ಲಘಟ್ಟಗೆ ಹೋದಾಗ ಅಲ್ಲಿಯೂ ಸಹ ನಾಲ್ಕು ಎನ್ ಎಮ್ ಆರ್ ಗಳಲ್ಲಿಯೂ ಸಹ ಹೆಚ್ಚು ಕೂಲಿ ಕಾರ್ಮಿಕರ ಹೆಸರಗಳನ್ನು ನಮೂದಿಸಿ ಆ ಪೈಕಿ ಕೇವಲ ಕೇಲವೊಂದು ಕೂಲಿ ಕಾರ್ಮಿಕರ ಮಾತ್ರ ಹಣ ಸಂದಾಯ ಮಾಡಿರುವುದು ನಮ್ಮ

ಗಮನಕ್ಕೆ ಬಂದಿರುತ್ತದೆ.

8. ಇಂಗಳಗೆಯಿಂದ ತರ್ಲಘಟ್ಟ ರಸ್ತೆಗೆ ಸಂಬಂದಪಟ್ಟ ಎನ್ ಎಮ್ ಆರ್ ನಕಲಿ ಆಗಿರುವುದು ಕಂಡುಬಂದಿರುತ್ತದೆ. ಸದರಿ ಎನ್ ಎಮ್ ಆರ್ ನಲ್ಲಿ ಯಾರಿಗೆ ಹಣ ಸಂದಾಯ ಮಾಡಬೇಕು ಅಂತ ಯಾವುದೇ ನಮೂದು ಇರುವುದಿಲ್ಲ, ಆದರೆ ಭರಮಗೌಡ ಮತ್ತು ದ್ಯಾವನಗೌಡ ಇವರಿಗೆ 2 ಚೆಕ್ಕಿನ ಮೂಲಕ ರೂ 1,52,600/, 1,30,800/ ನೀಡಿರುವುದು ಕಂಡುಬಂದಿರುತ್ತದೆ. ಸದರಿ ರವರು ಗುತ್ತಿಗೆದಾರರಾಗಿದ್ದು ಆದರೆ ಸದರಿ ಯೋಜನೆಯಡಿಯಲ್ಲಿ ಯಾವುದೇ ಗುತ್ತಿಗೆದಾರರನ್ನು ನೇಮಿಸಿಕೊಳ್ಳಲು ಅವಕಾಶ ಇರುವುದಿಲ್ಲ.

9. ಕುಂದಗೋಳದಿಂದ ಬಸವಿಹಾಳ ಇಲ್ಲಿ ಎನ್ ಎಮ್ ಆರ್ ನಲ್ಲಿ 98 ಕೂಲೀ ಕಾರ್ಮಿಕರ ಹೆಸರು ನಮೂದು ಇದ್ದು, ಆ ಪೈಕಿ 8 ಜನರಿಗೆ ಮಾತ್ರ 70,650/ ಪಾವತಿ ಆಗಿರುವುದು ಕಂಡುಬಂದಿರುತ್ತದೆ. ಸದರಿ ಯೋಜನೆಯ ಉದ್ದೇಶ ಕೂಲಿಕಾರ್ಮಿಕರು ಗೂಳೆ ಹೋಗುವುದನ್ನು ತಪ್ಪಿಸುವುದು ಆಗಿದ್ದು, ಇದರಲ್ಲಿ ಮುಖ್ಯವಾಗಿ ಗ್ರಾಮ ಪಂಚಾಯತ ಅಧ್ಯಕ್ಷರು, ಕಾರ್ಯದರ್ಶಿಗಳು ಹಾಗೂ ಆ ಸಮಯದ ಪಿಡಿಓ ಗಳ ಮುಖ್ಯ ಕರ್ತವ್ಯ ಆಗಿರುತ್ತದೆ. ಈ ರೀತಿ ನಾನು ಆ ಅವಧಿಯಲ್ಲಿ ತನಿಖೆ ಕೈಗೊಂಡಾಗ ಗ್ರಾಮ ಪಂಚಾಯತ ಅಧ್ಯಕ್ಷರಾದ ಕೋಟೆನ್ನವರ, 1 ನೇ ಆರೋಪಿ ಶ್ರೀಮತಿ ನೀಲವ್ವ ಭದ್ರಾಪುರ, 2 ನೇ ಆರೋಪಿ ಶ್ರೀಮತಿ ಮಮ್ತಾಜ ಬೇಗಂ, 3 ನೇ ಆರೋಪಿ ಮೆಹಬೂಬುಸಾಬ ನದಾಫ, 4 ನೇ ಆರೋಪಿ ನಾಗೇಶ ಶೆಟ್ಟನವರ, 5 ನೇ ಆರೋಪಿ ವೀರನಗೌಡ, 6 ನೇ ಆರೋಪಿ ಅಶೋಕ ವೀರಪ್ಪ ಶಿರೂರು, 7 ನೇ ಆರೋಪಿ ಶಂಕ್ರಪ್ಪ, 8 ನೇ ಆರೋಪಿ ಡೊಳೇಶ್ವರಪ್ಪ, 9 ನೇ ಆರೋಪಿ ಶಿವನಗೌಡ, 10 ನೇ ಆರೋಪಿ ಗುರುಶಿದ್ದಗೌಡ, 11 ನೇ ಆರೋಪಿ ಸಾವಂತ್ರೆವ್ವ, 12 ನೇ ಆರೋಪಿ ಹನಮಂತಗೌಡ, 13 ನೇ ಆರೋಪಿ ವೀರನಗೌಡ, 14 ನೇ ಆರೋಪಿ ಭರಮಪ್ಪ ಹಾಗೂ 15 ನೇ ಆರೋಪಿ ಶ್ರೀಮತಿ ನೀಲವ್ವ ಈ ವ್ಯಕ್ತಿಗಳು ಈ ರೀತಿ ಅಕ್ರಮವಾಗಿರುವ ಅವಧಿಯಲ್ಲಿ ಸದರಿ ಪಂಚಾಯತಿಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವ್ಯಕ್ತಿಗಳು ಆಗಿದ್ದರು. ಸಾಮಾನ್ಯವಾಗಿ ಒಂದು ಗ್ರಾಮ ಪಂಚಾಯತಿನಲ್ಲಿ ಯಾವುದೇ ಚೆಕ್ಕ ಪಾಸ್ ಆಗಬೇಕಾದರೆ ಅದಕ್ಕೆ ಅಧ್ಯಕ್ಷರ, ಕಾರ್ಯದರ್ಶಿಗಳು ಮತ್ತು ಪಿಡಿಓರವರ ಜಂಟಿ ರುಜುದ ಅವ್ಯಕತೆ ಇರುತ್ತದೆ.

10. ಮೇಲೆ ಹೇಳಿದ ಕಾಮಗಾರಗಳಿಗೆ ಸಂಬಂದಪಟ್ಟ ಹಾಗೇ ಆರೋಪಿಗಳು ತಮ್ಮ ಕರ್ತವ್ಯಲೋಪವನ್ನು ಎಸಗಿರುವುದು ಕಂಡುಬಂದಿರುತ್ತದೆ. ನಾವು ಪರಿಶೀಲನೆ ಮಾಡಿದಾಗ ಈ ರೀತಿ ಕರ್ತವ್ಯ ಲೋಪದಿಂದ ಆದ ಹಣದ ಅಕ್ರಮವು ಸುಮಾರು ರೂ.19,21,058/ ಎಂದು

ಕಂಡುಬಂದಿರುತ್ತದೆ. ಸದರಿ ಆರೋಪಿಗಳು ಅರ್ಹ ಇರುವ ಕೂಲಿ ಆಳುಗಳಿಗೆ ನೀಡುವ ಹಣವನ್ನು ತಪ್ಪಿಸಲು ಯಂತ್ರಗಳನ್ನು ಬಳಸಿ ಹಾಗೂ ಗುತ್ತಿಗೆದಾರರನ್ನು ಹಿಡಿದು ಕೆಲಸಗಳನ್ನು ಮಾಡಿಸಿಕೊಂಡು ಉಳಿದ ಹಣವನ್ನು ಅಕ್ರಮ ಮಾಡಿರುವುದು ಕಂಡುಬಂದಿರುತ್ತದೆ.

11. ನಾನು ಈ ಪ್ರಕಾರವಾಗಿ ವಿಚಾರಣಾ ವರದಿಯನ್ನು ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಜಿಲ್ಲಾ ಪಂಚಾಯತ ಧಾರವಾಡ ಇವರಿಗೆ ದಿಃ03.11.2010 ರಂದು ನೀಡಿರುತ್ತೇನೆ. ಅಲ್ಲದೇ 2014 ರಲ್ಲಿ ನನಗೆ ಕುಂದಗೋಳ ಪೊಲೀಸ್ ಠಾಣೆಗೆ ಕರೆಯಿಸಿ ನನ್ನ ಹೇಳಿಕೆಯನ್ನು ಪಡೆಯಲಾಗಿರುತ್ತದೆ. ಸಾಕ್ಷಿ ತಾನು ಪೊಲೀಸರಿಗೆ ನೀಡಿದ ಹೇಳಿಕೆಯನ್ನು ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ತಾನು ನೀಡಿದ ವಿಚಾರಣಾ ವರದಿ ಮತ್ತು ಅದರೊಂದಿಗೆ ಇರುವ ಪೋಟೋಗಳನ್ನು ನೋಡಿ ಗುರುತಿಸಿದ್ದು, ವಿಚಾರಣಾ ವರದಿಯನ್ನು ನಿಪಿಃ2 ಎಂದು, 9 ಪೋಟೋಗಳನ್ನು ನಿಪಿಃ3 ರಿಂದ 11 ಎಂದು, ಸಿಸಿ ನಂಃ50/2016 ರಲ್ಲಿ ಈಗಾಗಲೇ ಗುರುತಿಸಲಾಗಿದೆ. ಆರೋಪಿ ಪರ ವಕೀಲರ ತಕರಾರಿಗೆ ಒಳಪಟ್ಟು ಗುರುತಿಸಲಾಗಿರುತ್ತದೆ. ಸಾಕ್ಷಿ ತನ್ನ ಮೇಲಾಧಿಕಾರಿ ಇವರು ನನಗೆ ದಿಃ24.08.2010 ರಂದು ವಿಚಾರಣೆ ಮಾಡಬೇಕು ಅಂತ ನೀಡಿದ ಆದೇಶದ ಜರಾಕ್ಸ ಪ್ರತಿಯನ್ನು ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲುಃ ಶ್ರೀ ಸಿ ಎಮ್ ಕೆ ವಕೀಲರಿಂದ 2, 8 ಮತ್ತು 15 ಆರೋಪಿಗಳ ಪರ ವಕೀಲರು.**

1. ನಾನು ಪೊಲೀಸರು ನನ್ನ ಹೇಳಿಕೆಯನ್ನು ಪಡೆದಿರುವ ಬಗ್ಗೆ ಹೇಳಿದ್ದು, ಆ ರೀತಿ ಅವರು ಯಾವ ದಿನಾಂಕ ಹಾಗೂ ತಿಂಗಳು ಪಡೆದರು ಅಂತ ನಿರ್ದಿಷ್ಟವಾಗಿ ಹೇಳಲು ಆಗುವುದಿಲ್ಲ, ಆದರೆ ಅವರು 2014 ನೇ ಇಸ್ವಿಯಲ್ಲಿ ಪಡೆದಿರುತ್ತಾರೆ. ನನ್ನ ಹೇಳಿಕೆಯಲ್ಲಿ ನಾನು ಆರು ರೋಡಗಳ ಬಗ್ಗೆ ಹೇಳಿರುತ್ತೇನೆ. ದಿಃ24.08.2010 ರ ಆದೇಶದ ಪ್ರತಿಯು ಜಿಲ್ಲಾ ಪಂಚಾಯತ ಧಾರವಾಡದಲ್ಲಿ ಇರುತ್ತದೆ. ಸದರಿ ಆದೇಶದ ಪ್ರತಿಯನ್ನು ನನ್ನ ಮೇಲಾಧಿಕಾರಿಗಳು ಪೊಲೀಸರಿಗೆ ನೀಡಿರುವ ಅಥವಾ ನೀಡದೇ ಇರುವ ಬಗ್ಗೆ ಮಾಹಿತಿ ಇರುವುದಿಲ್ಲ, ಆದರೆ ನಾನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

2. ನರೇಗಾ ಯೋಜನೆಯಡಿಯಲ್ಲಿ ಗ್ರಾಮ ಪಂಚಾಯತಿಯ ಯಾವ ಯಾವ ಅಧಿಕಾರಿಗಳು ಯಾವ ಯಾವ ಕೆಲಸಗಳನ್ನು ಮಾಡಬೇಕು ಅನ್ನುವುದರ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ಸದರಿ ನರೇಗಾ ಯೋಜನೆಯಡಿಯಲ್ಲಿ ಆಗುವ ಕೆಲಸ ಕಾರ್ಯಗಳ ಇನಪೇಕ್ಷನ ಯಾರು ಮಾಡಬೇಕು ಎಂದರೆ ಸಾಕ್ಷಿ ಸಾಮಾನ್ಯವಾಗಿ ಗ್ರಾಮ ಪಂಚಾಯತಿ ಪಿಡಿಓ ಅಥವಾ ಕಾರ್ಯದರ್ಶಿ ಮತ್ತು ಅಧ್ಯಕ್ಷರು ಮಾಡಬೇಕಾಗಿರುತ್ತದೆ ಎಂದು ನುಡಿಯುತ್ತಾರೆ. ಈ ರೀತಿ

ಗ್ರಾಮ ಪಂಚಾಯತಿ ಅಧ್ಯಕ್ಷರು ಇನಪೆಕ್ಸನ ಮಾಡಬೇಕು ಅಂತ ಏನಾದರು ನಿಯಮ ಇದಿಯಾ ಎಂದರೆ ಸಾಕ್ಷಿ ಗ್ರಾಮ ಪಂಚಾಯತ ಹೊಣೆ ಎಂದರೆ ಅಧ್ಯಕ್ಷರು ಬರುತ್ತಾರೆ ಎಂದು ನುಡಿಯುತ್ತಾರೆ.

3. ಪಿಡಿಓ, ಅಧ್ಯಕ್ಷ ಚುನಾಯಿತ ಅಧಿಕಾರಿ ಆಗಿದ್ದರಿಂದ ಅವರು ಇನ್ಸಪೆಕ್ಷನಗೆ ಸಂಬಂದಪಟ್ಟ ಹಾಗೇ ಯಾವುದೇ ಕರ್ತವ್ಯ ಇರುವುದಿಲ್ಲ ಎಂದರೆ ಸಾಕ್ಷಿ ಇಡೀ ಭಾರತ ದೇಶದಲ್ಲಿ ಸಹಿ ಮಾಡುವ ಅಧಿಕಾರವನ್ನು ಕೇವಲ ಗ್ರಾಮ ಪಂಚಾಯತ ಅಧ್ಯಕ್ಷರಿಗೆ ಮಾತ್ರ ನೀಡಲಾಗಿರುತ್ತದೆ ಎಂದು ನುಡಿಯುತ್ತಾರೆ. ಇನ್ಸಪೇಕ್ಷನ ಮಾಡುವ ಅಧ್ಯಕ್ಷರ ಕೆಲಸವಲ್ಲ ಎಂದರೆ ಸಾಕ್ಷಿ ಮಾಡಬೇಕು ಎಂದು ನುಡಿಯುತ್ತಾರೆ. ಈ ರೀತಿ ಅಧ್ಯಕ್ಷರು ಇನ್ಸಪೆಕ್ಷನ ಮಾಡಬೇಕು ಅಂತ ಯಾವುದೇ ನಿಯಮ ಇರುವುದಿಲ್ಲ ಎಂದರೆ ಸಾಕ್ಷಿ ಗ್ರಾಮ ಪಂಚಾಯತಿ ಆ್ಯಕ್ಟ ಪ್ರಕಾರ ಮಾಡಲೇಬೇಕು ಅಂತ ಇದೆ ಎಂದು ನುಡಿಯುತ್ತಾರೆ.

4. ಇನ್ಸಪೆಕ್ಷನ ಮಾಡುವುದು ಚುನಾಯಿತ ಅಧಿಕಾರಿಗಳ ಕೆಲಸ ಆಗಿರುವುದಿಲ್ಲ, ಅದು ನೇಮಸಲ್ಪಟ್ಟ ನೌಕರ ಕೆಲಸ ಎಂದರೆ ಸಾಕ್ಷಿ ಭಾಗಶಃ ಒಪ್ಪುತ್ತೇನೆ ಎಂದು ನುಡಿಯುತ್ತಾರೆ. ನರೇಗಾ ಯೋಜನೆಯಡಿಯಲ್ಲಿ ಅನುದಾನ ಬಂದ ಮೇರೆಗೆ ಯಾವ ಯಾವ ಕೆಲಸ ಮಾಡಬೇಕು ಅಂತ ಒಂದು ಆ್ಯಕ್ಷನ ಪ್ಲಾನನ್ನು ಗ್ರಾಮ ಸಭೆಯಲ್ಲಿ ಮಾಡಿರುತ್ತಾರೆ. ಗ್ರಾಮ ಸಭೆ ಎಂದರೆ ಇಡೀ ಗ್ರಾಮದ ಜನ ಸೇರಿರುತ್ತಾರೆ ಎಂದರೆ ಸರಿ. ಸಾಮಾನ್ಯವಾಗಿ ಒಂದು ರಸ್ತೆ ಮಾಡಲು ಆಯ್ಕೆ ಮಾಡಿದಾಗ ಅಂದಾಜು ಪಟ್ಟಿಯನ್ನು ಅಭಿಯಂತರರು ತಯಾರು ಮಾಡುತ್ತಾರೆ. ಅದೇ ಪ್ರಕಾರ ಸದರಿ ಕಾಮಗಾರಿಗೆ ಎಷ್ಟು ಜನ ಕೂಲಿ ಕಾರ್ಮಿಕರು ಬೇಕು ಅಂತ ಅಭಿಯಂತರರೇ ಪಟ್ಟಿ ತಯಾರು ಮಾಡುತ್ತಾರೆ. ಈ ರೀತಿ ಅಭಿಯಂತರರು ಪಟ್ಟಿ ತಯಾರಿಸಿದ ನಂತರ ಆ ಗ್ರಾಮದ ಪಿಡಿಓ ರವರು ಕಾರ್ಯಾನ್ವಯ ಮಾಡುತ್ತಾರೆ.

5. ಕೂಲಿ ಕಾರ್ಮಿಕರ ದಿನಗೂಲಿಯನ್ನು ಸರಕಾರದವರೇ ನಿಗದಿಪಡಿಸುತ್ತಾರೆ. ಸದರಿ ಕೂಲಿ ಕಾರ್ಮಿಕರಿಗೆ ನೇಮಿಸುವ ಮತ್ತು ಪಗಾರ ಕೊಡುವ ಕೆಲಸ ಪಿಡಿಓ ಅಥವಾ ಕಾರ್ಯದರ್ಶಿಯಾಗಿದ್ದು ಆಗಿರುತ್ತದೆ. ಇಷ್ಟೆ ಜನ ಕೆಲಸಕ್ಕೆ ಬಂದಿದ್ದಾರೆ ಹಾಗೂ ಇಷ್ಟೆ ಹಣವನ್ನು ಅವರಿಗೆ ನೀಡಲಾಗಿದೆ ಅಂತ ಹೇಗೆ ಗೊತ್ತಾಗುತ್ತದೆ ಎಂದರೆ ಸಾಕ್ಷಿ ತಾಲೂಕ ಪಂಚಾಯಿತಿಯಲ್ಲಿ ಮಸ್ಟರ ರೂಲವನ್ನು ತಯಾರು ಮಾಡುತ್ತಾರೆ ಎಂದು ನುಡಿಯುತ್ತಾರೆ. ಆ ದಿನ ಬಂದ ವ್ಯಕ್ತಿಗೆ ಹಣ ಸಂದಾಯ ಆಗಿದೆ ಅಂತ ಹೇಗೆ ಗೊತ್ತಾಗುತ್ತದೆ ಎಂದರೆ ಸಾಕ್ಷಿ ಗ್ರಾಮ ಪಂಚಾಯತಿ ಕ್ಲರ್ಕ, ಪಂಚಾಯತಿ ಕಾರ್ಯದರ್ಶಿ ಹಾಗೂ ಪಿಡಿಓ ಇವರು ಮಸ್ಟರ ರೂಲ್ ನಲ್ಲಿ ಆ ದಿನ ಎಷ್ಟು ಜನ

ಬಂದರು ಮತ್ತು ಅವರು ಮಾಡಿದ ಕೆಲಸದ ಆದಾರದ ಮೇಲೆ ಅವರಿಗೆ ದಿನಗೂಲಿ ನೀಡಿರುವ ಬಗ್ಗೆ ಅದರಲ್ಲಿ ನಮೂದು ಮಾಡಲಾಗಿರುತ್ತದೆ.

6. ಒಬ್ಬ ಕೂಲಿ ಬಂದು ಕೆಲಸ ಮಾಡಿದ ನಂತರ ಸಂಜೆ ಅವನ ಕೂಲಿ ಹಣವನ್ನು ಅಭಿಯಂತರರು ಬಂದು ಎಷ್ಟು ಕೆಲಸ ಆಗಿದೆ ಅಂತ ನೋಡಿ ಮತ್ತು ಅದು ನಿಯಮಗಳನ್ವಯ ಆಗಿದಿಯೋ ಇಲ್ಲವೋ ಎಂದು ನೋಡಿ ನಂತರ 8 ದಿನಕ್ಕೆ ಒಂದು ಸಾರಿ ಕೂಲಿಯ ಬ್ಯಾಂಕ ಖಾತೆಗೆ ಜಮಾ ಆಗುತ್ತದೆ. ಈ ರೀತಿ ಪ್ರತಿಯೊಂದು ಕೂಲಿಗೆ ಹಣ ಜಮಾ ಮಾಡಲು ಪ್ರತಿಯೊಬ್ಬರಿಗೆ ಒಂದು ಪ್ರತ್ಯೇಕ ಚೆಕ್ಕು ನೀಡುವುದಿಲ್ಲ. ಹಣವನ್ನು ಜಮಾ ಮಾಡಲು ಬ್ಯಾಂಕ ಮ್ಯಾನೇಜರ ಇವರಿಗೆ ಸಂಬಂದಪಟ್ಟ ಗ್ರಾಮ ಪಂಚಾಯತ ಇವರು ಪತ್ರದ ಮೂಲಕ ಹಣವನ್ನು ಚೆಕ್ಕ ಮುಖಾಂತರ ಬ್ಯಾಂಕಿಗೆ ಕಳುಹಿಸಿ ಅದನ್ನು ಸಂಬಂದಪಟ್ಟ ಕೂಲಿ ಕಾರ್ಮಿಕರ ಖಾತೆಗೆ ಜಮಾ ಮಾಡಲು ತಿಳಿಸಿರುತ್ತದೆ. ಈ ರೀತಿ ಪತ್ರವನ್ನು ಬ್ಯಾಂಕಿಗೆ ಪಿಡಿಓ ಅಥವಾ ಕಾರ್ಯದರ್ಶಿ ಬರೆಯುತ್ತಾರೆ.

7. ಸಾಮಾನ್ಯವಾಗಿ ಚೆಕ್ಕನ್ನು ಪಿಡಿಓ ಅಥವಾ ಕಾರ್ಯದರ್ಶಿ ಬರೆಯುತ್ತಾರೆ, ಆದರೆ ಅದಕ್ಕೆ ರುಜುವನ್ನು ಪಿಡಿಓ ಹಾಗೂ ಅಧ್ಯಕ್ಷರು ಮಾಡುತ್ತಾರೆ. ಪಿಡಿಓ ಇವರು ನೀಡಿದ ವರದಿ ಮೇರೆಗೆ ಅಧ್ಯಕ್ಷರು ಚೆಕ್ಕಿಗೆ ರುಜು ಹಾಕುತ್ತಾರಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ವರದಿ ಸರಿಯೋ ತಪ್ಪೊ ಅಂತ ಪರಿಶೀಲನೆ ಮಾಡುವ ಅಧಿಕಾರ ಅಧ್ಯಕ್ಷರಿಗೆ ಇರುವುದಿಲ್ಲ ಎಂದರೆ ಸಾಕ್ಷಿ ಸಾಮಾನ್ಯವಾಗಿ ಮಾಡಬಹುದು ಎಂದು ನುಡಿಯುತ್ತಾರೆ.

8. ಆ ಜಾಗದ ಮೇಲೆ ಎಷ್ಟು ಜನ ಕೂಲಿಕಾರ್ಮಿಕರು ಬಂದಿದ್ದರು ಹಾಗೂ ಎಷ್ಟು ಕೆಲಸ ಆಗಿತ್ತು ಎನ್ನುವುದರ ಬಗ್ಗೆ ಅಧ್ಯಕ್ಷರಿಗೆ ಮಾಹಿತಿ ಇರುವುದಿಲ್ಲ ಎಂದರೆ ಸಾಕ್ಷಿ ಹೌದು ಇರುವುದಿಲ್ಲ ಎಂದು ನುಡಿಯುತ್ತಾರೆ. ಸಾಮಾನ್ಯವಾಗಿ ಚೆಕ್ಕಿಗೆ ಪಿಡಿಓ ಇವರು ಬರೆದಿರುವುದನ್ನು ನಂಬಿ ಅಧ್ಯಕ್ಷರು ಸಹಿ ಮಾಡಿರತ್ತಾರೆ ಎಂದರೆ ಸರಿ. ಹೀಗಾಗಿ ಕೆಲಸ ಮಾಡಿಸುವುದರಲ್ಲಿ ಅಧ್ಯಕ್ಷರಿಂದ ಯಾವುದೇ ಅಕ್ರಮ ಅಥವಾ ಅಪರಾಧ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಮಾನ್ಯವಾಗಿ ಅಧ್ಯಕ್ಷರು ಅನಕ್ಷರಸ್ಥರು ಇದ್ದರೆ ಈ ಕೆಲಸ ಕಾರ್ಯಗಳ ಬಗ್ಗೆ ತಿಳಿದುಕೊಳ್ಳಲು ಮಾಧ್ಯಮ ಏನು ಇದೆ ಎಂದರೆ ಸಾಕ್ಷಿ ಪಿಡಿಓ ಎಂದು ನುಡಿಯುತ್ತಾರೆ.

9. ನಾನು ಪರಿಶೀಲನೆ ಮಾಡುವ ಸಮಯದಲ್ಲಿ ನಾನು ನನ್ನ ಮುಖ್ಯ ವಿಚಾರಣೆಗಳಲ್ಲಿ ಹೇಳಿದ ಆರು ರಸ್ತೆಗಳ ಕೆಲಸ ಆಗಿತ್ತು. ಸದರಿ ಕೆಲಸ ಅಭಿಯಂತರರು ಮಾಡಿದ ಎಸ್ಟಿಮೇಶನ ಪ್ರಕಾರ ಆಗಿತ್ತಾ ಎಂದರೆ ಸಾಕ್ಷಿ ಆಗಿತ್ತು ಎಂದು ನುಡಿಯುತ್ತಾರೆ. ನಾನು ನನ್ನ ಮುಖ್ಯ

ವಿಚಾರಣೆಯಲ್ಲಿ ಯಂತ್ರಗಳನ್ನು ಬಳಸಿಕೊಂಡು ಕೆಲಸ ಮಾಡಿರುವ ಬಗ್ಗೆ ಹೇಳಿದ್ದು ಆ ರೀತಿ ಯಂತ್ರಗಳನ್ನು ಬಳಿಸಿರುವುದನ್ನು ನಾನು ಕಣ್ಣಾರೆ ನೋಡಿರುವುದಿಲ್ಲ. ಈ ರೀತಿ ಯಂತ್ರಗಳನ್ನು ಬಳಸಿ ಕೆಲಸ ಮಾಡಿಸಿದ್ದಾರೆ ಅಂತ ನನಗೆ ದೂರುದಾರರು ನೀಡಿದ ದೂರಿನ ಮೇರೆಗೆ ತಿಳಿಯಿತು. ಸದರಿ ದೂರನ್ನು ನೀವು ಸರಿ ಇದಿಯೋ ಇಲ್ಲವೋ ಅಂತ ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿ ನನಗೆ ಪರಿಶೀಲನೆ ಮಾಡುವ ಅವಕಾಶ ಇರಲಿಲ್ಲ, ಯಾಕೆಂದರೆ ನಾನು ಸ್ಥಳಕ್ಕೆ ಹೋದಾಗ ಕೆಲಸವೆಲ್ಲಾ ಮುಗಿದು ಹೋಗಿತ್ತು ಎಂದು ನುಡಿಯುತ್ತಾರೆ.

10. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೂಲಿಕಾರ್ಮಿಕರನ್ನು ಸಪ್ಲಾಯ ಮಾಡುವ ಕೆಲಸ ಮಾಡುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಹಳ್ಳಿಗಳಲ್ಲಿ ಕೂಲಿಕಾರ್ಮಿಕರ ಸಂಘ ಇರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಸಾಮಾನ್ಯವಾಗಿ ಸದರಿ ಕೂಲಿಕಾರ್ಮಿಕರ ಸಂಘದ ಅಧ್ಯಕ್ಷನಿಗೆ ನರೇಗಾ ಯೋಜನೆಯಡಿಯಲ್ಲಿ ಕೂಲಿ ಕಾರ್ಮಿಕರಿಗೆ ಸಲ್ಲಬೇಕಾದ ಹಣದ ಚೆಕ್ಕನ್ನು ನೀಡುತ್ತಾರೆ ಎಂದರೆ ಅದಕ್ಕೆ ಅವಕಾಶ ಇರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಹೇಳಿದ ಹಾಗೇ ಕೆಲಸಗಳಿಗೆ ಸಂಬಂದಪಟ್ಟ ಹಾಗೇ ಯಾವುದೇ ಯಂತ್ರಗಳ ಬಳಕೆಯಾಗಿರುವುದಿಲ್ಲ ಎಂದರೆ ಸರಿಯಲ್ಲ. ಸದರಿ ಕೆಲಸಗಳನ್ನು ನಿಯಮದನ್ವಯ ಕೂಲಿಕಾರ್ಮಿಕರ ಮೂಲಕವೇ ಮಾಡಿಸಲಾಗಿರುತ್ತದೆ ಎಂದರೆ ಸರಿಯಲ್ಲ.

11. ನಾನು ಪರಿಶೀಲಿಸುವಾಗ ಸುಮಾರು 300 ಜಾಬ್ ಕಾರ್ಡಗಳು ಇದ್ದವು. ಸದರಿ 300 ಜಾಬ್ ಕಾರ್ಡಗಳಿಗೆ ಹಣ ಸಂದಾಯ ಆಗಿರಲಿಲ್ಲ. ಕೂಲಿ ಬರದೇ ಇರುವ ಸಂಬಂಧ ಯಾವುದೇ ಕೂಲಿಕಾರ್ಮಿಕರ ತಕರಾರು ಮಾಡಿದ್ದರಾ ಅಂತ ನನಗೆ ಗೊತ್ತಿಲ್ಲ. ಕೂಲಿಕಾರ್ಮಿಕರ ಖಾತೆಗೆ ಹಣ ಜಮಾ ಆಗದೇ ಇರುವ ಬಗ್ಗೆ ವಿಚಾರಣಾ ವರದಿಯನ್ನು ನೀಡಿರುತ್ತೇನೆ. ನಾನು ಸತ್ಯಕ್ಕೆ ದೂರವಾದ ವರದಿಯನ್ನು ಈ ಪ್ರಕರಣದಲ್ಲಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣದಲ್ಲಿ ಅಧ್ಯಕ್ಷರಿಂದ ಅಕ್ರಮವಾಗಿದೆ ಅಂತ ನಾನು ಸುಳ್ಳು ನುಡಿಯುತಿದ್ದೇನೆ ಎಂದರೆ ಸಾಕ್ಷಿ ನಾನು ಹೇಳಿದ್ದು ಹಾಗೂ ವರದಿ ನೀಡಿದ್ದು ಎಂದು ನುಡಿಯುತ್ತಾರೆ. 1 ನೇ ಆರೋಪಿ ಯಾವುದೇ ಅಕ್ರಮ ಮಾಡಿರುವುದಿಲ್ಲ ಎಂದರೆ ಸರಿಯಲ್ಲ.

12. 4 ನೇ ಆರೋಪಿಯ ಕೆಲಸ ಏನು ಇತ್ತು ಅಂತ ನನಗೆ ಗೊತ್ತಿಲ್ಲ. ನಾನು ವಿಚಾರಣೆ ಮಾಡುವ ಸಮಯದಲ್ಲಿ 4 ನೇ ಆರೋಪಿ ವಾಚ್ ಮೇನ್ ಅಂತ ಕೆಲಸ ಮಾಡುತಿದ್ದ ಎನ್ನುವ ಬಗ್ಗೆ ನಾನು ಯಾವುದೇ ವರದಿ ನೀಡಿರುವುದಿಲ್ಲ. ಸಾಮಾನ್ಯವಾಗಿ ವಾಚಮೇನ್ ಎಂದರೆ ಅವರು ಕಚೇರಿಯನ್ನು ಕಾಯುವ ಕೆಲಸ ಮಾಡುತ್ತಾರೆ ಎಂದರೆ ಸರಿ. ವಾಚಮೆನಗೆ ನರೇಗಾ

ಯೋಜನೆಯಲ್ಲಿ ಯಾವುದೇ ಕಾರ್ಯಭಾರ ಇರುವುದಿಲ್ಲ ಎಂದರೆ ಸರಿ. 4 ನೇ ಆರೋಪಿಯು ಸಹ ಯಾವುದೇ ಅಕ್ರಮವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. 1 ಮತ್ತು 4 ನೇ ಆರೋಪಿಗಳ ವಿರುದ್ಧ ನಾನು ಸುಳ್ಳು ವರದಿ ನೀಡಿ ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ. ನಾನು ನೀಡಿದ ನಿಪಿಃ3 ರಿಂದ 11 ಫೋಟೋಗಳನ್ನು ಯಾರು ತೆಗೆದರು ಅಂತ ನನಗೆ ಗೊತ್ತಿಲ್ಲ. ನಿಪಿಃ3 ರಿಂದ 11 ಫೋಟೋಗಳ ನೆಗಟಿವ ಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನಿಪಿಃ3 ರಿಂದ 11 ಫೋಟೋಗಳಿಗೂ ಹಾಗೂ ಆರೋಪಿಗಳಿಗೂ ಯಾವುದೇ ಸಂಬಂದ ಇರುವುದಿಲ್ಲ ಎಂದರೆ ಸರಿಯಲ್ಲ. ನಿಪಿಃ2 ವರದಿಯನ್ನು ನಾನು ಸತ್ಯಕ್ಕೆ ವಿರುದ್ಧವಾಗಿ ನೀಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೇ ಜಾಗೃತ ದಳದ ಮುಖ್ಯಸ್ಥನಾಗದೇ, ಯಾವುದೇ ಸ್ಥಾನಿಕ ತನಿಖೆಯನ್ನು ಮಾಡದೇ, 2, 8 ಮತ್ತು 15 ನೇ ಆರೋಪಿಗಳ ವಿರುದ್ಧ ಸುಳ್ಳು ವರದಿ ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ. ಇಷ್ಟೆ ಕೂಲಿಗಳನ್ನು ಆ ಸಮಯದಲ್ಲಿ ನೇಮಿಸಲಾಗಿದ್ದು ಅಂತ ಆ ಬಗ್ಗೆ ಸಂಬಂದಪಟ್ಟ ಪಂಚಾಯತಿನಲ್ಲಿ ಮಾಹಿತಿ ಲಭ್ಯ ಇತ್ತಾ ಎಂದರೆ ಸಾಕ್ಷಿ ನರೇಗಾ ಯೋಜನೆಯಡಿಯಲ್ಲಿ ಲಭ್ಯ ಇತ್ತು ಎಂದು ನುಡಿಯುತ್ತಾರೆ. ಸದರಿ ಪಟ್ಟಿಯನ್ನು ನ್ಯಾಯಾಲಯಕ್ಕೆ ನನ್ನ ವಿಚಾರಣಾ ವರದಿಯಲ್ಲಿ ತಿಳಿಸಿರುತ್ತೇನೆ.

<u>ಪಾಟೀ ಸವಾಲುಃ ಶ್ರೀ ಎ ಆರ್ ಕೆ ವಕೀಲರಿಂದ 3 ನೇ ಆರೋಪಿ ಪರ ವಕೀಲರುಃ</u>

1. ನಾನು ಸಾಮಾನ್ಯವಾಗಿ ಚೆಕ್ಕ ಮೇಲೆ ಪಿಡಿಓ ಮತ್ತು ಸೆಕ್ರಟರಿ ಇವರು ಸಹಿ ಮಾಡುತ್ತಾ ಅಂತ ಸಾಕ್ಷಿಯಲ್ಲಿ ನುಡಿದು ಆ ರೀತಿ ಯಾವ ಯಾವ ಚೆಕ್ಕಿಗೆ ಯಾರು ಯಾರು ಸಹಿ ಮಾಡಿದ್ದಾರೆ ಎಂದರೆ ಸಾಕ್ಷಿ ಕೇವಲ ಕಾರ್ಯದರ್ಶಿಗಳು ಮಾತ್ರ ಮಾಡಿದ್ದಾರೆ ಎಂದುನುಡಿಯುತ್ತಾರೆ. ಕಾರ್ಯದರ್ಶಿಗಳು ನಿರ್ದಿಷ್ಟವಾಗಿ ಯಾವ ಚೆಕ್ಕಿಗೆ ಸಹಿ ಮಾಡಿದ್ದರು ಅಂತ ಹೇಳಲಾಗುತ್ತಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿಯುತ್ತಾರೆ. ನರೇಗಾ ಯೋಜನೆಯಡಿಯಲ್ಲಿ ಸಾಮಾನ್ಯವಾಗಿ ಚೆಕ್ಕ ಬರೆದುಕೊಡುವ ಯಾವುದೇ ಅಧಿಕಾರ ಕಾರ್ಯದರ್ಶಿಗೆ ಇರುವುದಿಲ್ಲ, ಅದು ಪಿಡಿಓಗೆ ಮಾತ್ರ ಇದೆ ಎಂದರೆ ಸಾಕ್ಷಿ 2010 ನೇ ಇಸ್ವಿಯಲ್ಲಿ ಸಂಪೂರ್ಣವಾಗಿ ಪಿಡಿಓಗಳ ನೇಮಕಾತಿ ಆಗಿರಲಿಲ್ಲ, ಹಾಗಾಗೀ ಕಾರ್ಯದರ್ಶಿಗಳೇ ಆ ಜವಾಬ್ದಾರಿಯನ್ನು ಹೊಂದಿದ್ದರು ಎಂದು ನುಡಿಯುತ್ತಾರೆ. 2010 ನೇ ಇಸ್ವಿಯಲ್ಲಿ ಇಂಗಳಗಿ ಗ್ರಾಮ ಪಂಚಾಯತಿನಲ್ಲಿ ಪಿಡಿಓ ನೇಮಕ ಆಗಿದ್ದರು ಎಂದರೆ ಸರಿ. ಹಾಗಾಗೀ 2010 ರಲ್ಲಿ ಬರೆದ ಎಲ್ಲಾ ಚೆಕ್ಕುಗಳಿಗೆ ಇಂಗಳಗಿ ಗ್ರಾಮ ಪಂಚಾಯತ ಪಿಡಿಓ ಇವರು ಸಹಿ ಮಾಡಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ. 3 ನೇ ಆರೋಪಿ ಯಾವುದೇ ತಪ್ಪು ಮಾಡದಿದ್ದರು ಸಹ ಅವನ ವಿರುದ್ಧ ಸುಳ್ಳು

ವರದಿ ಸಲ್ಲಿಸಿದ್ದೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ 3 ನೇ ಆರೋಪಿ ಪರ ವಕೀಲರು 2, 8 ಮತ್ತು 15 ನೇ ಆರೋಪಿಗಳ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡು ಹಾಗೂ 3 ನೇ ಆರೋಪಿ ಪರ ವಕೀಲರು 1, 4 ರಿಂದ 6, 9 ರಿಂದ 14 ನೇ ಆರೋಪಿಗಳ ಪರ ವಕೀಲರು ಹಾಗೂ 3 ನೇ ಆರೋಪಿ ಪರ ವಕೀಲರು ಮಾಡಿದ ಪಾಟೀ ಸವಾಲನ್ನು ಅಳವಡಿಸಿಕೊಂಡು ಮುಂದುವರೆಯುವುದಾಗಿ ತಿಳಿಸಿರತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

**Sd/-**

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**

<u>ದಿವಾಣಿ ಹಾಗೂ ಪ್ರ.ದ.ನ್ಯಾ. ದಂ.ಗಳ ನ್ಯಾಯಾಲಯ ಕುಂದಗೋಳ</u>

<u>ಸಿಸಿ ನಂಃ 51/2016</u>

<u>ಸಿಡಬ್ಲೂಃ2 ಪಿ ಡಬ್ಲ್ಯೂಃ2</u>

ಹೆಸರುಃ ಅಶೋಕ ಖಜ್ಜಿ

ತಂದೆ ಹೆಸರುಃ ಪರಪ್ಪ

ವಯಸ್ಸುಃ 60 ವರ್ಷಗಳು.

ಉದ್ಯೋಗಃ ಕೂಲಿ ಕೆಲಸ

ವಾಸ ಸ್ಥಳಃ ಇಂಗಳಗಿ.

<u>ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತುಃ ದಿಃ 19/07/2024.</u>

<u>ಮುಖ್ಯ ವಿಚಾರಣೆಃ ಮಾನ್ಯ ಸಸಅ ರವರಿಂದಃ</u>

1. ಸಾಕ್ಷಿಗೆ ಒಂದು ದಾಖಲೆಯೊಂದನ್ನು ತೋರಿಸಿ, ಸದರಿ ದಾಖಲೆ ಗುನ್ನಾ ಸ್ಥಳದ ಪಂಚನಾಮೆ ಯಾಗಿದ್ದು, ಅದರ ಮೇಲೆ ಇರುವ ತನ್ನ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿದ್ದರಿಂದ ಸದರಿ ದಾಖಲೆಯನ್ನು ನಿಪಿಃ11 ಎಂದು ಹಾಗೂ ಸಾಕ್ಷಿಯ ಸಹಿಯನ್ನು ನಿಪಿಃ11 ಎ ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ನಾನು ಪೊಲೀಸರು ಕೋರಿಕೆ ಮೇರೆಗೆ ಮಾಡಿರುತ್ತೇನೆ. ನನಗೆ ನಿಪಿಃ11 ರ ವಿಚಾರ ಗೊತ್ತಿಲ್ಲ. ಪೊಲೀಸರು ನನ್ನ ಮತ್ತು ಚಾಸಾಃ3 ರವರ ಸಮಕ್ಷಮ ಸ್ಥಳ ಪಂಚನಾಮೆ ಬರೆದು ಯಾವುದೇ ವಸ್ತುವನ್ನು ವಶಕ್ಕೆ ಪಡೆದಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸಸಅ ರವರು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.)**

<u>ಪಾಟೀ ಸವಾಲುಃ ಮಾನ್ಯ ಸಸಅ ರವರಿಂದಃ</u>

2. ದಿಃ22.05.2012 ರಂದು ನನ್ನ ಮತ್ತು ಚಾಸಾಃ3 ಸಮಕ್ಷಮ ಚಾಸಾಃ1 ರವರ ಸ್ಥಳದಲ್ಲಿ ಗುನ್ನೆ ಜಾಗೆಯಾದ ಇಂಗಳಗಿ ಗ್ರಾಮ ಪಂಚಾಯತಿಯಲ್ಲಿ ರೂ 19,21,058/ ರೂಪಾಯಿಗಳನ್ನು ಎಮ್ ಜಿ ಎನ್ ಆರ್ ಇ ಜಿ ಆರ್ ಯೋಜನೆಯಡಿಯಲ್ಲಿ ಆರೋಪಿತರು ಹಣ ದುರುಪಯೋಗ ಮಾಡಿಕೊಂಡಿರುವ ಬಗ್ಗೆ ಪೊಲೀಸರು ಸಮಯ ಮ.3ಃ30 ರಿಂದ 4ಃ30 ರ ವರೆಗೆ ಪಂಚನಾಮೆಯನ್ನು ಮಾಡಿದ್ದು ಗೊತಿದ್ದರು ಸಹ ಈಗ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ನುಡಿಯುತಿದ್ದೇನೆ ಎಂದರೆ ಸರಿಯಲ್ಲ.

(ಈ ಹಂತದಲ್ಲಿ ಆರೋಪಿಗಳ ಪರ ವಕೀಲರು ಪಾಟೀ ಸವಾಲು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.)

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೆ ಸರಿ ಇದೆ.**

Sd/-

**ದಿವಾಣಿ ನ್ಯಾಯಾಧೀಶರು ಹಾಗೂ ಪ್ರ.ದ.ನ್ಯಾ. ದಂ.ಗಳು**

**ಕುಂದಗೋಳ.**